ಅ) ಕರ್ನಾಟಕ ಗೃಹ ಮಂಡಳಿಯಿಂದ ಈಗಾಗಲೇ ಹಂಚಿಕೆ ಮಾಡಿರುವ LIG, MIG, HIG ಮನೆಗಳ ಸಂಖ್ಯೆ ಎಷ್ಟು?

ಆ) ಈಗಾಗಲೇ ಈ ಮನೆಗಳಿಗಾಗಿ ಅರ್ಜಿ ಸಲ್ಲಿಸಿರುವವರ ಸಂಖ್ಯೆ ಎಷ್ಟು; ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ;

ಇ) ಹಲವಾರು ವರ್ಷಗಳಿಂದ ಅರ್ಜಿದಾರರು ಅರ್ಜಿಯನ್ನು ಸಲ್ಲಿಸಿದ್ದರೂ, ಈವರೆಗೆ ಮನೆ ಹಂಚಿಕೆ ಮಾಡದೇ ವಿಳಂಬ ಮಾಡಲು ಕಾರಣವೇನು;

ಈ) ಸರ್ಕಾರ ಶೀಘ್ರಗತಿಯಲ್ಲಿ ಮನೆಗಳನ್ನು ಹಂಚಿಕೆ ಮಾಡಲು ಕೈಗೊಳ್ಳುವ ಕ್ರಮವೇನು?

ಶ್ರೀ ಖಮರುಲ್ ಇಸ್ಲಾಂ (ವಸತಿ ಸಚಿವರು) :

ಅ) ಕರ್ನಾಟಕ ಗೃಹ ಮಂಡಳಿಯಿಂದ ವರ್ಗವಾರು ಹಂಚಿಕೆ ಮಾಡಿದ ವಿವರ ಕೆಳಗಿನಂತಿದೆ

ಆರ್ಥಿಕ ದುರ್ಬಲ ವರ್ಗ	=	37059
ಕಡಿಮೆ ಆದಾಯ ವರ್ಗ	=	39830
ಮಧ್ಯಮ ಆದಾಯ ವರ್ಗ	=	24154
ಹೆಚ್ಚಿನ ಆದಾಯ ವರ್ಗ	=	4957
ಒಟ್ಟು	=	**106000**

ಆ) ಈ ಮನೆಗಳಿಗಾಗಿ ಅರ್ಜಿ ಸಲ್ಲಿಸಿರುವವರ ಸಂಖ್ಯೆ 1,31,000. ಇವುಗಳ ಪೈಕಿ 1,06,000 ಅರ್ಜಿದಾರರಿಗೆ ಮನೆಗಳನ್ನು ಹಂಚಿಕೆ ಮಾಡಲಾಗಿದೆ.

ಇ) ಭೂ ಮಾಲೀಕರ ತಕರಾರುಗಳಿಂದ ಭೂ ಸ್ವಾಧೀನದಲ್ಲಿ ಆಗುವ ವಿಳಂಬ. ಹಾಗೂ ಗುತ್ತಿಗೆದಾರರ ತಕರಾರಿನಿಂದ ಯೋಜನೆ ಪೂರ್ಣಗೊಳಿಸಲು ವಿಳಂಬ ಆಗುವುದು. ಈ ಕಾರಣಗಳಿಂದ ಹಂಚಿಕೆ ಮಾಡುವಲ್ಲಿ ವಿರಳ ವಿಳಂಬವಾಗಿರುತ್ತದೆ.

ಈ) 100 ಹೊಸ ವಸತಿ ಯೋಜನೆಗಳನ್ನು ಹಮ್ಮಿಕೊಂಡಿದ್ದು ಮನೆಗಳ ಹಂಚಿಕೆ ಮಾಡಲು ಶೀಘ್ರ ಕ್ರಮ ಕೈಗೊಳ್ಳುವುದು.

ಸಾರಿಗೆ ಸಂಸ್ಥೆಯಲ್ಲಿ ಹಿರಿಯ ನಾಗರೀಕರಿಗೆ ರಿಯಾಯಿತಿ ಬಸ್‌ಪಾಸ್

891 (1260) ಶ್ರೀ ಚನ್ನಿಗಪ್ಪ ಸಿ. (ಕೊರಟಗೆರೆ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಹಿರಿಯ ನಾಗರೀಕರಿಗೆ ಸಾರಿಗೆ ಸಂಸ್ಥೆಯಲ್ಲಿ ಪ್ರಯಾಣಿಸಲು ಈ ಹಿಂದೆ ನೀಡುತ್ತಿದ್ದ ರಿಯಾಯಿತಿ ಪಾಸು ಸೌಲಭ್ಯಗಳನ್ನು ರದ್ದುಪಡಿಸಿರುವುದರಿಂದ ರಾಜ್ಯದ ಲಕ್ಷಾಂತರ ವೃದ್ಧರಿಗೆ ತೀವ್ರ ರೀತಿಯ ಅನಾನುಕೂಲವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಅ) ಈ ಸೌಲಭ್ಯವನ್ನು ಒದಗಿಸಿಕೊಡುವಂತೆ ವೃದ್ಧರು, ಸಂಘ ಸಂಸ್ಥೆಗಳು ಸರ್ಕಾರಕ್ಕೆ ಹಲವಾರು ಮನವಿಗಳನ್ನು ಮಾಡಿಕೊಂಡಿದ್ದರೂ ಇದರ ಬಗ್ಗೆ ಯಾವುದೇ ಕ್ರಮ ಜರುಗಿಸದಿರಲು ಹಾಗೂ ಈ ಸೌಲಭ್ಯವನ್ನು ಒದಗಿಸದಿರಲು ಕಾರಣವೇನು;

ಇ) ಈ ಸೌಲಭ್ಯವನ್ನು ಒದಗಿಸಿಕೊಟ್ಟರೆ ಸರ್ಕಾರದ ಬೊಕ್ಕಸಕ್ಕೆ ಬೀಳುವ ಹೊರೆ ಎಷ್ಟು;

ಈ) ಈ ಸೌಲಭ್ಯವನ್ನು ಜಾರಿಗೆ ತಂದು ರಾಜ್ಯದ ಲಕ್ಷಾಂತರ ವೃದ್ಧರಿಗೆ ಅನುಕೂಲ ಕಲ್ಪಿಸಿ ಕೊಡುವುದು ಯಾವಾಗ?

ಶ್ರೀ ಸಿ.ಆರ್. ಸಗೀರ್ ಅಹ್ಮದ್ (ಸಾರಿಗೆ ಸಚಿವರು) :

ಅ) ಇಲ್ಲ

ಆ) ಈ ಹಿಂದೆ ಸಾರಿಗೆ ಸಂಸ್ಥೆಯು ಹಿರಿಯ ನಾಗರೀಕರಿಗೆ ತನ್ನ ನಗರ ಮತ್ತು ನಗರ ಹೊರ ವಲಯ ಸಾರಿಗೆಗಳಲ್ಲಿ ಶೇಕಡ 50 ದರ ರಿಯಾಯಿತಿ ಸೌಲಭ್ಯವನ್ನು ಒದಗಿಸಿತ್ತು. ಸಂಸ್ಥೆಯ ಕಠಿಣ ಆರ್ಥಿಕ ಪರಿಸ್ಥಿತಿಯಿಂದಾಗಿ ಸರ್ಕಾರದ ಆದೇಶ ಸಂಖ್ಯೆ ಎಫ್ ಟಿ 145 ಟಿ ಆರ್ ಎ 91, ದಿನಾಂಕ: 17-12-91 ರಂತೆ ಈ ಸೌಲಭ್ಯವನ್ನು ಹಿಂದಕ್ಕೆ ಪಡೆಯಲಾಯಿತು.

ಇ) ಸಂಸ್ಥೆಯ ನಗರ, ನಗರ ಹೊರವಲಯ ಮತ್ತು ಗ್ರಾಮಾಂತರ ಸಾರಿಗೆಗಳಲ್ಲಿ ಪ್ರತಿದಿನ ಸುಮಾರು 2 ಲಕ್ಷ ಪ್ರಯಾಣಿಕರು ಪ್ರಯಾಣಿಸುವವರೆಂದು ಅಂದಾಜು ಮಾಡಲಾಗಿ, ಶೇಕಡ 50 ರಷ್ಟು ಪ್ರಯಾಣ ದರ ರಿಯಾಯಿತಿ ನೀಡಿದಲ್ಲಿ ಸಂಸ್ಥೆಯ ಮೇಲೆ ವಾರ್ಷಿಕ 102 ಕೋಟಿ ರೂಪಾಯಿಗಳ ಆರ್ಥಿಕ ಹೊರೆ ಉಂಟಾಗುತ್ತದೆ.

ಈ) ಈ ಬಗ್ಗೆ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.

ಅಕ್ರಮ ಸಂಭಾವನೆ

892 (989) ಶ್ರೀ ಸಿ.ಚನ್ನಿಗಪ್ಪ (ಕೊರಟಗೆರೆ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಬೆಂಗಳೂರು ನಗರದಲ್ಲಿ ಸ್ಟಾಂಪ್ ವೆಂಡರ್ ಪರವಾನಗಿ ಪಡೆದಿರುವವರ ಸಂಖ್ಯೆ ಎಷ್ಟು;

ಸ್ಟಾಂಪ್ ವೆಂಡರ್ ಪರವಾನಗಿದಾರರು ಪರವಾನಗಿಯನ್ನು ನೋಂದಾಯಿಸಿದ ನಂತರ ರನ್ಯೂವಲ್ ಅವಧಿ ಯಾವಾಗ;

ಸ್ಟಾಂಪ್ ವೆಂಡರ್ ಪರವಾನಗಿಯನ್ನು ನಿರುದ್ಯೋಗಿ ಯುವಕರಿಗೆ, ನಿವೃತ್ತ ಅಧಿಕಾರಿಗಳಿ ನೀಡಲಾಗಿದೆಯೆ;

ಪರವಾನಗಿದಾರರಿಗೆ ಸರ್ಕಾರವು ಈಗ ನೀಡುತ್ತಿರುವ ಶೇಕಡವಾರು ಮೊತ್ತವೆಷ್ಟು;

2) ಸ್ಟಾಂಪ್ ವೆಂಡರ್ ಪರವಾನಗಿದಾರರು ರಿನ್ಯೂವಲ್ ಮಾಡಿಕೊಳ್ಳುವಾಗ ಸರ್ಕಾರಕ್ಕೆ ರಿನ್ಯೂವಲ್ ಶುಲ್ಕವನ್ನು ಸಲ್ಲಿಸಬೇಕೆ;